**CENTRAL BOARD OF SECONDARY EDUCATION**

**MODEL PAPER-1**

**SUBJECT: KANNADA**

**SUBJECT CODE - 015**

**CLASS - X**

**(2020 - 2021)**

**TIME: 3 HOURS** **MARKS:80**

---

**ಸೂಚನೆಗಳು:**

- ಪತ್ರಿಕೆಯು A ಮತ್ತು B ಎಂಬ ಎರಡು ಭಾಗಗಳನ್ನು ಒಳಗೊಂಡಿರುತ್ತವೆ.
- ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 17 ಮುಖ್ಯ ಪ್ರಶ್ನೆಗಳು ಇರುತ್ತವೆ.
- ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿ.
- ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.

| | | |
|---|---|---|
| ಭಾಗ – A (40 ಅಂಕಗಳು) | (ವಾಚನ ಮತ್ತು ಗ್ರಹಿಕಾ ಕೌಶಲ್ಯ) | 10 ಅಂಕಗಳು |
| | (ಅನ್ವಯಿಕ ವ್ಯಾಕರಣ) | 16 ಅಂಕಗಳು |
| | (ಬಹುಆಯ್ಕೆಪ್ರಶ್ನೆ-ಪಠ್ಯಗಳ ಅಧ್ಯಯನ) | 14 ಅಂಕಗಳು |
| ಭಾಗ – B (40 ಅಂಕಗಳು) | ಬರವಣಿಗೆ ಕೌಶಲ್ಯ | 12 ಅಂಕಗಳು |
| | ಪಠ್ಯಗಳ ಅಧ್ಯಯನ | 28 ಅಂಕಗಳು |
| | ಒಟ್ಟು ಅಂಕಗಳು | 80 ಅಂಕಗಳು |

www.FirstRanker.com

**ಭಾಗ – A (40 ಅಂಕಗಳು)**

**(ವಾಚನ ಮತ್ತು ಗ್ರಹಿಕಾ ಕೌಶಲ್ಯ) = 10 ಅಂಕಗಳು**

**I.** **(a) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**(1X5=5 ಅಂಕಗಳು)**

'ಗುರಿ ಹೊಂದಿರುವುದಕ್ಕೆ ಗುರಿ ಸಾಧಿಸುವುದಕ್ಕೂ ನಡುವೆ ಇರುವ ಸೇತುವೆಯೇ ಶಿಸ್ತು' ಜಿಮ್ ರಾನ್ ಹೇಳಿದ್ದಾರೆ. ಇಡೀ ದೇಶವೇ ಎದುರು ನೋಡುತ್ತಿರುವ ಫೆಬ್ರವರಿಯ ಕೊನೆಯ ದಿನದ ಆಯ-ವ್ಯಯ ಲೆಕ್ಕದ ನಂತರ

,ಬಹುಶಃ ಮೇಲಿನ ಮಾತನ್ನು ಬಜೆಟ್ ಗೂ ಅನ್ವಯಿಸಬಹುದು. ಆದರೆ ವಿಷಯಕ್ಕೆ ಬರುವ ಮುನ್ನ, ಒಬ್ಬ ಖ್ಯಾತ ಮಹಾಕಾವ್ಯ ರಚನೆಕಾರನ ಕಥೆಯನ್ನು ಗಮನಿಸೋಣ ಕನ್ನಡ ಮೇರು ಕವಿ ಕುಮಾರವ್ಯಾಸನದ್ದು "ಇಟ್ಟ ಕೈ ಎತ್ತದಗ್ಗಳಿಕೆ". ಇದರರ್ಥ, ಆತ ಒಮ್ಮೆ ಬರೆದರೆ ಅದನ್ನು ಮತ್ತೆ ತಿದ್ದುತ್ತಿರಲಿಲ್ಲ. ದಿನವೂ ನದಿ ಸ್ನಾನದ ನಂತರ ಮನೆಯಲ್ಲಿಯೇ ಹತ್ತಿರದ ಮಂಟಪವೊಂದರಲ್ಲಿ ಕನ್ನಡದಲ್ಲಿ ಮಹಾಭಾರತವನ್ನು ಬರೆಯಲು ಕೂರುತ್ತಿದ್ದ ಕುಮಾರವ್ಯಾಸ, ಮೈ ಒಣಗುವವರೆಗೆ ಅವಿರತವಾಗಿ ಬರೆಯುತ್ತಿದ್ದ. ಒಣಗಿದ ನಂತರ ಬರವಣಿಗೆ ನಿಲ್ಲಿಸಿ, ತನ್ನ ದೈನಂದಿನ ಕೆಲಸ ಮಾಡುತ್ತಿದ್ದ. ಇದನ್ನು ದಿನವೂ ಎಡಬಿಡದೆ ಮಾಡುತ್ತಿದ್ದ. ಏಕಚಿತ್ತನಾಗಿ ಕೃತಿರಚನೆಗೆ ತೊಡಗುತ್ತಿದ್ದ ಇವನಿಗೆ ಪದಗಳನ್ನು ತಿದ್ದುವ, ತೀಡುವ, ಬದಲಾಯಿಸುವ ಅವಶ್ಯಕತೆಯೇ ಬರುತ್ತಿರಲಿಲ್ಲ. ತನ್ನ ದಿನಚರಿಗೆ ಚ್ಯುತಿ ಬಾರದ ಹಾಗೆ ತನ್ನ ಗುರಿಗೆ ನಿಷ್ಠನಾಗಿ, ಚೊಕ್ಕಟವಾಗಿ ಬರೆದ ಕುಮಾರವ್ಯಾಸನ ಮಹಾಕಾವ್ಯ ರಚನೆಗೆ ಆತನ ಪಾಂಡಿತ್ಯ ಎಷ್ಟು ಕಾರಣವೋ, ಅಷ್ಟೇ ಆತನ ಶಿಸ್ತೂ ಕಾರಣ. ಆತ ತನ್ನ ಸಮಯವನ್ನೂ, ಸಂಪನ್ಮೂಲಗಳನ್ನೂ ಬಜೆಟ್ ಮಾಡಿದ್ದ.

ಬಜೆಟ್ ಎಂದರೆ ಇದೇ ಶಿಸ್ತು. ಯಾವುದೇ ಮಹಾಕಾರ್ಯ ಮಾಡಲು ನಮಗೆ ನಮ್ಮ ಪ್ರತಿಭೆ, ಕೌಶಲ್ಯಗಳು ಎಷ್ಟು ಅಗತ್ಯವೋ, ಶಿಸ್ತೂ ಅಷ್ಟೇ ಅಗತ್ಯ. ಶಿಸ್ತಿನಿಂದಾಗಿ, ನಮಗೆ ಅರಿವಿಲ್ಲದಂತೆಯೇ ನಮ್ಮ ಪ್ರತಿಭೆ, ಕೌಶಲ್ಯಗಳು ನಾಶವಾಗಿಬಿಡಬಹುದು. ಕಾರ್ಯಸಾಧನೆ ದುಸ್ತರವಾಗಿ ಬಿಡಬಹುದು. ರಾಯ್ ಸ್ಮಿತ್ ನ ಪ್ರಕಾರ, ಶಿಸ್ತು ಎನ್ನುವುದು ನಮ್ಮ ಪ್ರತಿಭೆಯನ್ನು ಹರಿತಗೊಳಿಸಿ ಅದನ್ನು ನಮ್ಮ ಸಾಮರ್ಥ್ಯವನ್ನಾಗಿ ಪರಿವರ್ತಿಸುವ ಬೆಂಕಿ. ನಮ್ಮ ಪ್ರತಿಭೆ ಈ ಶಿಸ್ತು ಎಂಬ ಅಗ್ನಿಪರೀಕ್ಷೆಯಲ್ಲಿ ಗೆದ್ದಾಗ ನಾವು ಜೀವನದಲ್ಲಿ ಸಫಲರಾಗುತ್ತೇವೆ. ಹಾಗಾಗದಿದ್ದಾಗ ವಿಫಲರಾಗುತ್ತೇವೆ. ಅದಕ್ಕಾಗಿಯೇ ದೇಶಗಳು, ರಾಜ್ಯಗಳು, ನಗರಗಳು 'ಬಜೆಟ್' ಮಾಡುವ ಶಿಸ್ತನ್ನು ಅನುಸರಿಸುತ್ತವೆ.

ಬಜೆಟ್ ಎನ್ನುವುದು ನಮಗೆ ಏನು ಬೇಕು ಎನ್ನುವುದನ್ನು ಆಗಾಗ ನೆನಪಿಸುವ ಸಾಧನ. ನಮ್ಮ ಆರ್ಥಿಕ ಗುರಿಯನ್ನು ತಲುಪುವಂತೆ ಮಾಡುವ ಮಾರ್ಗದರ್ಶಿ. ಬಜೆಟ್ ಮಾಡುವುದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ನಾವು ಹೆಚ್ಚು ಸಮರ್ಥರಾಗುತ್ತೇವೆ. ಪದೇಪದೇ ಒಂದು ಕೆಲಸವನ್ನು ಮಾಡುವಾಗ, ಮನುಷ್ಯನ ಮನಸ್ಸು ಆ ಕೆಲಸವನ್ನು ಸುಲಭವಾಗಿ ಮಾಡುವ ವಿಧಾನಗಳನ್ನು ಹುಡುಕುತ್ತಿರುತ್ತದೆ. ನಮ್ಮ ಜೀವನದಲ್ಲಿ ನಾವು ಮಾಡುತ್ತಿದ್ದರೆ , ನಮ್ಮ ಆರ್ಥಿಕ ಗುರಿ ತಲುಪಲು ಸುಲಭ ಹಾಗೂ ಸೃಜನಶೀಲ ಮಾರ್ಗಗಳನ್ನು ನಾವು ಕಂಡುಕೊಳ್ಳಲು ಅನುವಾಗುತ್ತದೆ. ಒಟ್ಟಿನಲ್ಲಿ ಬಜೆಟ್ ನಮ್ಮನ್ನು ಪರಿಪಕ್ವವಾಗಿಸುತ್ತದೆ.

www.FirstRanker.com

ಪ್ರಶ್ನೆಗಳು:

**1. 'ಗುರಿ ಹೊಂದಿರುವುದಕ್ಕೆ ಗುರಿ ಸಾಧಿಸುವುದಕ್ಕೂ ನಡುವೆ ಇರುವ ಸೇತುವೆಯೇ -----**

1) ಮನಸ್ಸು 2) ಶಿಸ್ತು

3) ಹಣ 4) ಪ್ರತಿಭೆ

**2. "ಇಟ್ಟ ಕೈ ಎತ್ತದಗ್ಗಳಿಕೆ". ಈ ಮಾತು -----ಗೆ ಅನ್ವಯಿಸುತ್ತದೆ.**

1) ಜಿಮ್ ರಾನ್ 2) ಜನಸಾಮಾನ್ಯ

3) ಕುಮಾರವ್ಯಾಸ 4) ರಾಯ್ ಸ್ಮಿತ್

**3. ನಮ್ಮ ಪ್ರತಿಭೆ, ಕೌಶಲ್ಯಗಳು ನಾಶವಾಗಲು________ಕಾರಣ.**

1) ಕಣ್ಣು ಕಾಣದಿರುವುದು 2) ಶಿಫಾರಸ್ಸು

3) ಅಪಾರ ಪಾಂಡಿತ್ಯ 4) ಅಶಿಸ್ತು

**4. ನಮ್ಮ ಆರ್ಥಿಕ ಗುರಿಯನ್ನು ತಲುಪುವಂತೆ ಮಾಡುವ ಮಾರ್ಗದರ್ಶಿ------**

1) ಬಜೆಟ್ 2) ಕುಮಾರವ್ಯಾಸ

3) ಮಹಾಭಾರತ 4) ಅಗ್ನಿಪರೀಕ್ಷೆ

**5. ಬಜೆಟ್ ಮಾಡುವುದರಿಂದ --------- ಹೆಚ್ಚುತ್ತದೆ.**

1) ಆತ್ಮವಿಶ್ವಾಸ 2) ಸಂಪತ್ತು

3) ದೇಹದ ತೂಕ 4) ಸೋಮಾರಿತನ

**ಅಥವಾ**

**(b) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**(1X5=5 ಅಂಕಗಳು)**

ಭಾರತ- ಚೀನಾ- ನೇಪಾಳಗಳ ನಡುವೆ ಇರುವ 'ಕಾಲಾಪಾನಿ' ಎಂಬ ಪುಟ್ಟ ಭೂಪ್ರದೇಶ ಈಗ ನೇಪಾಳ ಹಾಗೂ ಭಾರತಗಳ ನಡುವೆ ಸಣ್ಣದೊಂದು ವಿವಾದ ಹೊಗೆಯಾಡುವಂತೆ ಮಾಡಿದೆ. ನವೆಂಬರ್‌ನಲ್ಲಿ ಭಾರತ ಸರಕಾರ ದೇಶದ ಹೊಸ ರಾಜಕೀಯ ನಕ್ಷೆಯನ್ನು ಬಿಡುಗಡೆ ಮಾಡಿತು. ಜಮ್ಮು- ಕಾಶ್ಮೀರ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜನೆಗೊಂಡ ಬಳಿಕ ಅದನ್ನು ತೋರಿಸುವ ಗಡಿ ವಿಭಜನೆಯನ್ನು ಸೇರಿಸಿ ಈ ನಕ್ಷೆಯನ್ನು ತಯಾರಿಸಲಾಗಿತ್ತು. ಈ ನಕ್ಷೆಯ ಪ್ರಕಟಣೆಯಿಂದ ಪಾಕಿಸ್ತಾನಕ್ಕೆ ಕೋಪ ಬಂದದ್ದು ಸಹಜವೇ. ಆದರೆ ನೇಪಾಳಕ್ಕೂ ಗಾಬರಿಯಾಯಿತು. ಅದಕ್ಕೆ ಕಾರಣ, ಕಾಲಾಪಾನಿ ಎಂಬ ಪುಟ್ಟ ಭೂಪ್ರದೇಶವೊಂದರ ಬಗ್ಗೆ ಉಳಿದುಕೊಂಡಿರುವ ಗೊಂದಲ. ಭಾರತ ಕಾಲಾಪಾನಿಯನ್ನು ತನ್ನದೆಂದು ತೋರಿಸಿದೆ; ಆದರೆ ಅದು ಮೂಲತಃ ನೇಪಾಳದ್ದು ಎಂಬುದು ಆ ದೇಶದ ವಾದ. ಈಗ ಈ ಕುರಿತ ವಿವಾದ ಹೊಗೆಯಾಡುತ್ತಿದೆ. 'ಕಾಲಾಪಾನಿ' ಎಂಬ ಪ್ರದೇಶ ಇರುವುದು ಭಾರತದ ಉತ್ತರಾಖಂಡ ರಾಜ್ಯದ ಗಡಿ ಹಾಗೂ ನೇಪಾಳದ ಗಡಿ ಸೇರುವಲ್ಲಿ. ಅದೇ ಹೊತ್ತಿಗೆ, ಇನ್ನೊಂದು ಮೂಲೆಯಿಂದ ಚೀನಾದ ಒಂದು ತ್ರಿಕೋನದಂಥ ಭಾಗ ಕೂಡ ಇಲ್ಲಿಗೆ ಚಾಚಿಕೊಳ್ಳುತ್ತದೆ. ಅಂದರೆ ಇದು ಮೂರು ದೇಶಗಳು- ಚೀನಾ, ನೇಪಾಳ ಮತ್ತು ಭಾರತ- ಸೇರುವಂಥ ತ್ರಿಸಂಧಿ. ನೇಪಾಳದೊಂದಿಗೆ ಇಂಥ ಎರಡು ತ್ರಿಸಂಧಿಗಳು

www.FirstRanker.com

ಭಾರತಕ್ಕಿವೆ. ಒಂದು ಲಿಪುಲೇಖ್ ಪ್ರದೇಶದ ಕಾಲಾಪಾನಿ. ಇನ್ನೊಂದು ಸಿಕ್ಕಿಂ ಹಾಗೂ ನೇಪಾಳದ ಪೂರ್ವಕ್ಕಿರುವ ಜಿನ್ಸಂಗ್ ಚುಲಿ ಗಡಿ ಪ್ರದೇಶ.

1816ರಲ್ಲಿ ಬ್ರಿಟಿಷ್ ಇಂಡಿಯಾ ಹಾಗೂ ನೇಪಾಳದ ನಡುವೆ ಒಂದು ಒಪ್ಪಂದವಾಯಿತು. ನೇಪಾಳದ ಪಶ್ಚಿಮಕ್ಕೆ ಹರಿಯುವ ಕಾಲಿ ನದಿಯೇ ಭಾರತದೊಂದಿಗಿನ ಪಶ್ಚಿಮ ಗಡಿ ಎಂದು ಅದರಲ್ಲಿ ಒಪ್ಪಲಾಯಿತು. ಆದರೆ, ಈ ಕಾಲಿ ನದಿಯ ಮೂಲ ಯಾವುದೆಂದು ಸ್ಪಷ್ಟವಾಗಲಿಲ್ಲ. ಹಲವು ಬ್ರಿಟಿಷ್ ಸರ್ವೇಯರ್‌ಗಳು ಹಲವು ಉಪನದಿಗಳನ್ನು ಮೂಲವೆಂದು ತೋರಿಸಿದರು. ಕಾಲಾಪಾನಿ ಪ್ರದೇಶದ ಪಶ್ಚಿಮಕ್ಕಿರುವ ನದಿಯನ್ನು ಗಡಿಯೆಂದು ನೇಪಾಳ ಹೇಳುತ್ತದೆ. ಆದರೆ ಆ ನದಿಯನ್ನೂ ಸೇರಿಸಿಕೊಂಡು ಅದರ ಪೂರ್ವಕ್ಕಿರುವ ಪರ್ವತದ ಕಡಿದಾದ ಅಂಚು ಗಡಿಯೆಂದು ಭಾರತ ಹೇಳುತ್ತದೆ. ಇದು ವಿವಾದದ ಮೂಲ. ಈ ಒಟ್ಟೂ ಪ್ರಾಂತ್ಯ ಇರುವುದು ಲಿಪುಲೆಖ್ ಪರ್ವತದ ತಪ್ಪಲಿನಲ್ಲಿದೆ. 1962ರಿಂದ ಇಂಡೋ ಟಿಬೆಟನ್ ಬಾರ್ಡರ್ ಪೊಲೀಸ್ ದಳ ಈ ಪ್ರದೇಶವನ್ನು ನೋಡಿಕೊಳ್ಳುತ್ತಿದೆ.

**ಪ್ರಶ್ನೆಗಳು:**

**1. ಪುಟ್ಟ ಭೂಪ್ರದೇಶವಾದ____ ಭಾರತ- ಚೀನಾ- ನೇಪಾಳಗಳ ನಡುವೆ ವಿವಾದ ಹೊಗೆಯಾಡುವಂತೆ ಮಾಡಿದೆ.**

1) ಉತ್ತರಖಂಡ 2) ಸಿಕ್ಕಿಂ

3) ಕಾಲಾಪಾನಿ 4) ಪಾಕಿಸ್ತಾನ

**2. ಇತ್ತೀಚೆಗೆ ------ ಕೇಂದ್ರಾಡಳಿತ ಪ್ರದೇಶಗಳೆಂದು ವಿಭಜನೆಗೊಂಡಿವೆ.**

1) ಜಮ್ಮು-ಕಾಶ್ಮೀರ 2) ಡಾಯು-ದಾಮನ್

3) ಧರ್ಮಶಾಲಾ 4) ಪುದುಚರಿ

**3. ಕಾಲಾಪಾನಿ ತ್ರಿಸಂಧಿಯಲ್ಲಿ -------ದೇಶಗಳ ಗಡಿಗಳನ್ನು ಕಾಣಬಹುದು.**

1) ಭಾರತ-ಭೂತಾನ್-ಚೀಣಾ 2) ಭಾರತ-ಚೀಣಾ-ಶ್ರೀಲಂಕಾ

3) ಭಾರತ-ಚೀಣಾ-ಮ್ಯೆನಾಮಾರ್ 4) ಭಾರತ-ಚೀಣಾ-ನೇಪಾಳ.

**4. ಕಾಲಾಪಾನಿ --------- ಪರ್ವತದ ತಪ್ಪಲಿನಲ್ಲಿದೆ.**

1) ಕಾರ್ಗಿಲ್ 2) ಸಿಯಾಚಿನ್ ಹಿಮಪರ್ವತ

3) ಲಿಪುಲೆಖ್ 4) ಜಿನ್ಸಂಗ್ ಚುಲಿ

**5. ವಿವಾದಿತ ಕಾಲಾಪಾನಿ ಪ್ರದೇಶವನ್ನು------- ಬಾರ್ಡರ್ ಪೊಲೀಸ್ ದಳ ನೋಡಿಕೊಳ್ಳುತ್ತಿದೆ.**

1) ಇಂಡೋ ಟಿಬೆಟನ್ 2) ನೇಪಾಳ

www.FirstRanker.com

3) ಚೀಣಾ 4) ಭಾರತ

**II.**

**(a) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**(1X5=5 ಅಂಕಗಳು)**

ಎಡಕಲ್ಲು ಗುಡ್ಡದ ತುತ್ತತುದಿಗೆ ಹತ್ತಿದರೆ ಅಲ್ಲಿ ಎರಡು ಬೃಹತ್ ಬಂಡೆಗಳ ನಡುವೆ ಗುಹೆಯಂತಹ ಜಾಗದಲ್ಲಿ ಕಲ್ಲಿನ ಬಂಡೆಗಳ ಮೇಲೆ ಸಾವಿರಾರು ವರ್ಷಗಳ ಹಿಂದೆ ಬರೀ ಗೆರೆಗಳ ಲಿಪಿಯಲ್ಲಿ ಕೆತ್ತಿರುವ ಶಿಲಾಭಿತ್ತಿಯನ್ನು ಕಾಣಬಹುದು. ಸುಮೇರಿಯ ನಾಗರೀಕತೆಯ ಲಿಪಿಯನ್ನು ಹೋಲುವ ಆ ಅದ್ಭುತ ಕೆತ್ತನೆಯ ಸಂಕೀರ್ಣತೆಯನ್ನು ಕಂಡು ಬೆರಗಾಗದವರಿಲ್ಲ. ಈ ಶಿಲಾಭಿತ್ತಿಯನ್ನು ಕೆತ್ತಿದ ಶಿಲ್ಪಿಯು ತನ್ನ ಕಾಲದ ಚರಿತ್ರೆಯ ಯಾವುದೋ ಮಹತ್ತರ ವಿವರ ಅಥವಾ ರಹಸ್ಯವನ್ನು ಹಿಡಿದಿಡಲು ಪ್ರಯತ್ನಿಸಿರಬಹುದು ಅಲ್ಲವೇ? ಅಥವಾ ಯಾವುದು ಕಠೋರ ಘಟನಾವಳಿಗಳನ್ನು ಚಿತ್ರಿಸಿರಬಹುದಲ್ಲವೇ? ತಮ್ಮ ನೆನಪುಗಳನ್ನು ಭಾವನೆಗಳನ್ನು ಅನಿಸಿಕೆಗಳನ್ನು ಸೆರೆಹಿಡಿದು ಇತರರಿಗೆ ಹಂಚಲು ಆತ ಕೆತ್ತಿ ಇರಬಹುದಲ್ಲವೇ? ಹೌದು, ಕೆತ್ತನೆಯಲ್ಲಿಯೇ ಏಕೆ? ಅವರಿಗೂ ಒಂದು ಭಾಷೆ ಇತ್ತಲ್ಲವೇ? ಭಾಷೆಯ ಮೂಲಕವೇ ತಮ್ಮ ಭಾವನೆಗಳನ್ನು ನೆನಪುಗಳನ್ನು ಅನಿಸಿಕೆಗಳನ್ನು ಕಟ್ಟಿ ಇತರರಿಗೆ ಹಂಚಬಹುದಿತ್ತಲ್ಲವೇ? ಇನ್ನು ಭಾಷೆಯ ಬಗ್ಗೆ ಹೇಳುವುದಾದರೆ, ಭಾಷೆಗೊಂದು ಮಿತಿಯಿದೆ. ಹೇಳುವವರ ಮನಸ್ಸಿನಲ್ಲಿ ಮೂಡಿರುವ ಭಾವ ರೂಪವನ್ನು ಭಾಷೆಯ ಮೂಲಕ ಯಥವತ್ತಾಗಿ ವಿವರಿಸುವ ಸಾಧ್ಯತೆಯ ಬಗ್ಗೆಯಾಗಲಿ, ಅಥವಾ ಕೇಳಿದವರು ಭಾವಾಂತರಿಸುವಾಗ ತಮ್ಮ ಮನಸ್ಸಿನಲ್ಲಿ ಆ ಭಾವದ ಸ್ಪಷ್ಟರೂಪ ಮೂಡುವ ಬಗ್ಗೆಯಾಗಲಿ ಸಂಪೂರ್ಣ ಭರವಸೆ ಇಲ್ಲ. ಅದಕ್ಕೆಂದೆ ಚಿತ್ರಣ, ಕೆತ್ತನೆ ಹುಟ್ಟಿರುವ ಸಾಧ್ಯತೆ ಇದೆ. ಅಲ್ಲದೆ ಭಾಷೆ ಮಾತನಾಡಿದ ತಕ್ಷಣ ಮಾಯವಾಗಿ ಹೋಗುವ ತರಂಗ ರೂಪ. ಮಾತನಾಡಿದ ನುಡಿಗಳು ಹೇಳುವವರ ಅಥವಾ ಕೇಳಿಸಿಕೊಳ್ಳುವವರ ನೆನಪಿನಲ್ಲಿ ಉಳಿಯದಿದ್ದರೆ ಅವು ಬಿಂಬಿಸಬೇಕಿದ್ದ ಭಾವನೆ ಕಳೆದುಹೋಗುತ್ತದೆ. ಅಥವಾ ಅವು ಕಟ್ಟಿ ನಿಲ್ಲಿಸಬೇಕಿದ್ದ ಘಟನೆಯ ನೆನಪೆ ಮರೆತು ಹೋಗುವ ಸಾಧ್ಯತೆ ಇದೆ. ಆದರೆ ಬರೆಹ ರೂಪದಲ್ಲಿ, ಚಿತ್ರ ರೂಪದಲ್ಲಿ ಕೆಡೆದಿಟ್ಟರೆ ಅವುಗಳ ಮೂಲಕ ವ್ಯಕ್ತವಾಗುವ ವಸ್ತು ವಿಷಯಗಳು ಅನಂತತೆಗೆ ಹರಿದು ನಿಲ್ಲುವ ಶಕ್ತಿ ಬಂದು ಶಾಶ್ವತವಾಗಿ ನೆಲೆಯಾಗುವ ಸಾಧ್ಯತೆ ಇದೆ.

www.FirstRanker.com

ಬರೆಯುವ ಕ್ರಿಯೆ ಮಾನವನಲ್ಲಿ ಅಂತರ್ಗತವಾಗಿ ವಿಕಾಸಗೊಂಡ ವರ್ತನೆಯಲ್ಲ. ಅದು ಮಾನವ ಇತ್ತೀಚೆಗೆ ರೂಡಿಸಿಕೊಂಡಿರುವ ಗುಣ; ಕೇವಲ ಇತ್ತೀಚೆಗೆ. ಬದಲಿಗೆ ಅನಿಸಿಕೆಗಳನ್ನು ವಿವಿಧ ರೂಪಗಳಲ್ಲಿ ಅಭಿವ್ಯಕ್ತಗೊಳಿಸುವ ಶಕ್ತಿ ಮಾನವನಲ್ಲಿ ಬಹಳ ಹಿಂದಿನಿಂದಲೇ ಅಂತರ್ಗತವಾಗಿದೆ. ಆ ಅಭಿವ್ಯಕ್ತನೆಯೂ ಕೂಡ ಮಾನವನಿಗೆ ಅರ್ಥಪೂರ್ಣ ಎನಿಸುವುದು ಅದು ಇತರರ ಮನಮುಟ್ಟಿದಾಗ ಮಾತ್ರ. ಮಾನವ ಮಾನವ ಸಾವಿರಾರು ವರ್ಷಗಳ ಹಿಂದೆ ಶಾಶ್ವತ ಚಿತ್ರಗಳನ್ನು ಕಲ್ಲಿನ ಮೇಲೆ ಕೆತ್ತಿದ ಕಾರಣ, ತನ್ನ ಚಿಂತನೆ ಶಾಶ್ವತವಾಗಿರಲೆಂದು.ಈ ತುಡಿತವೇ ಇಂದು ಬರೆಯುವ ಕ್ರಿಯೆಯಾಗಿ ರೂಪುಗೊಂಡಿದೆ ಎನ್ನಬಹುದು.

**ಪ್ರಶ್ನೆಗಳು:**

**1. ಎಡಕಲ್ಲುಗುಡ್ಡದ ಗುಹೆಗಳಲ್ಲಿ ------- ಶಿಲಾಭಿತ್ತಿಗಳನ್ನು ಕಾಣಬಹುದು.**

1) ಸುಮೇರಿಯ ನಾಗರೀಕತೆ 2) ಸಿಂಧೂ ನಾಗರೀಕತೆ

3) ನೈಲ್ ನದಿಯ ನಾಗರೀಕತೆ 4) ಬ್ಯಾಬಿಲೋನಿಯಾದ ನಾಗರೀಕತೆ.

**2. ಮಾತನಾಡಿದ ತಕ್ಷಣ ಮಾಯವಾಗಿ ಹೋಗುವ ತರಂಗ ರೂಪ -------**

1) ಶಿಲಾಭಿತ್ತಿ 2) ಭಾಷೆ

3) ವರ್ಣಚಿತ್ರ 4) ರೇಖಾಚಿತ್ರ

**3. ಮಾನವನ ಮನಸ್ಸಿನ ಭಾವನೆಗಳನ್ನು ಶಾಶ್ವತವಾಗಿ -------ಮೂಲಕ ಸಂರಕ್ಷಿಸಬಹುದು.**

1) ವಾದಗಳ 2) ಬರೆಹ-ಚಿತ್ರಗಳರೂಪದ

3) ವಿಚಾರಗಳ 4) ಚರ್ಚೆಗಳ

**4. ಮಾನವನ ಅನಿಸಿಕೆಗಳು ಅಭಿವ್ಯಕ್ತಿಗೊಂಡು ಅರ್ಥಪೂರ್ಣವಾಗುವುದು ಅದು ಇತರರ ---------.**

1) ಅತ್ತಾಗ 2) ನಕ್ಕಾಗ

3) ಕಷ್ಟಪಟ್ಟಾಗ 4) ಮನಮುಟ್ಟಿದಾಗ

**5. ಮಾನವನಿಗೆ ಇಂದು ಬರೆಯುವ ತುಡಿತಕ್ಕೆ ಕಾರಣ -------**

1) ಕಲ್ಲಿನ ಮೇಲಿನ ಚಿತ್ರಗಳು 2) ಕಂಪ್ಯೂಟರ್

3) ಮೊಬೈಲ್ 4) ದೂರದರ್ಶನ

www.FirstRanker.com

**ಅಥವಾ**

**(b) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**(1X5=5 ಅಂಕಗಳು)**

ಜಗದ್ವಿಖ್ಯಾತ ಮೈಸೂರಿನ ಬೃಂದಾವನ ಮತ್ತು ಬೆಂಗಳೂರಿನ ಸಸ್ಯಕಾಶಿ ಲಾಲ್ ಬಾಗ್ ಸೌಂದರ್ಯಕ್ಕೆ ಮಾರುಹೋಗದೆ ಇರುವವರು ಯಾರು? ಇವುಗಳ ಚೆಲುವನ್ನು ಸವಿಯಲು ಪ್ರತಿನಿತ್ಯ ಸಾವಿರಾರು ಜನ ಹರಿದು ಬರುತ್ತಾರೆ. ಕರ್ನಾಟಕದ ಇಂತಹ ಅನೇಕ ಸಸ್ಯೋದ್ಯಾನಗಳ ಅನುಪಮ ಚೆಲುವಿಗೆ ಕಾರಣಕರ್ತರಾದವರು ಉದ್ಯಾನವಿನ್ಯಾಸಗಾರ ಜಿ. ಹೆಚ್. ಕೃಂಬಿಗಲ್ ರವರು. ಇವರ ಪೂರ್ಣ ಹೆಸರು ಗುಸ್ತವ್ ಹರ್ಮನ್ ಕೃಂಬಿಗಲ್ ಮೂಲತಹ ಜರ್ಮನಿಯವರು.

FirstRanker.com
Firstranker's choice


ಕೃಂಬಿಗಲ್ ಜರ್ಮನಿಯಲ್ಲಿ ಜನಿಸಿದರು. ಜರ್ಮನಿಯ ಆಲಂಕಾರಿಕ ತೋಟಗಾರಿಕೆಯ ಶಿಕ್ಷಣ ಪೂರೈಸಿದ ನಂತರ ಪದವಿ ತರಬೇತಿ ಪಡೆದರು. ಅವರಿಗೆ ಜರ್ಮನಿ ಆಸಕ್ತಿ ಇರಲಿಲ್ಲ. ಅವರಿಗೆ ಇಂಗ್ಲೆಂಡ್ ಆಳ್ವಿಕೆ ಇರುವ ದೇಶಗಳಲ್ಲಿ ಕೆಲಸ ಮಾಡುವ ಬಯಕೆ ಇತ್ತು. ಇದೇ ಸಂದರ್ಭದಲ್ಲಿ ತಮ್ಮ ರಾಜ್ಯದ ಉದ್ಯಾನಗಳ ಅಭಿವೃದ್ಧಿಯ ಸಲುವಾಗಿ ಸಮರ್ಥ ತಜ್ಞರೊಬ್ಬರನ್ನು ಕಳುಹಿಸಿಕೊಡಬೇಕೆಂದು ಬರೋಡಾದ ಸಯ್ಯಾಜಿರಾವ್ ಮಹಾರಾಜರು ಲಂಡನ್ನಿನ ಅಧಿಕಾರಿಗಳಿಗೆ ಪತ್ರ ಬರೆದರು. ತೋಟಗಾರಿಕೆಯಲ್ಲಿ ಹೊಸ ಸಾಹಸಗಳನ್ನು ಮಾಡಲು ಕಾತರಿಸುತ್ತಿದ್ದ ಯುವಕ ಕೃಂಬಿಗಲ್ ಅವರನ್ನು ಲಂಡನ್ ಅಧಿಕಾರಿಗಳು ಕಳುಹಿಸಿಕೊಟ್ಟರು. ಕೃಂಬಿಗಲ್ ತಮ್ಮ ಸಸ್ಯಜ್ಞಾನ ಮತ್ತು ಪ್ರತಿಭೆಯಿಂದ ಬರೋಡ ರಾಜ್ಯದಲ್ಲಿ ಅನೇಕ ಸುಂದರ ಉದ್ಯಾನವನಗಳನ್ನು ನಿರ್ಮಿಸಿ ದೇಶದ ಗಮನ ಸೆಳೆದರು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಶಾಲ ಆವರಣವು ಸಸ್ಯ ಸಂಪತ್ತಿನಿಂದ ಕಂಗೊಳಿಸುವುದರಲ್ಲಿ ಅವರ ಪಾತ್ರವಿದೆ.

೧೯೦೮ರಲ್ಲಿ ಮೈಸೂರು ಸರ್ಕಾರವು ಉದ್ಯಾನವನಗಳ ನಿರ್ವಹಣೆಗಾಗಿ 'ಸರ್ಕಾರಿ ತೋಟಗಾರಿ ಇಲಾಖೆ' ಎಂಬ ಇಲಾಖೆಯನ್ನು ಸ್ಥಾಪಿಸಿ ಅದರ ಪ್ರಥಮ ನಿರ್ದೇಶಕರಾಗಿ ಕೃಂಬಿಗಲ್ ಅವರನ್ನು ನೇಮಿಸಿತು. ನಂತರ ಕೃಂಬಿಗಲ್ ಬೆಂಗಳೂರಿನ ಲಾಲ್ ಬಾಗ್ ಸಸ್ಯೋದ್ಯಾನದ ಕ್ಯುರೇಟರಾಗಿ ನೇಮಕಗೊಂಡರು. ಲಾಲ್ ಬಾಗ್ ನಲ್ಲಿ ಆಕರ್ಷಕವಾದ ಕಾಲು ಹಾದಿಗಳನ್ನು ನಿರ್ಮಿಸಿ ಅದರ ಉದ್ದಕ್ಕೂ ವರ್ಷಪೂರ್ತಿ ಹೂಬಿಡುವ ಗಿಡಗಳನ್ನು ನೆಡಿಸಿದರು. ನಾಡಿನ ಅದ್ಭುತ ವಿನ್ಯಾಸಗಳು ಅವರ ಕಲಾ ಪ್ರಜ್ಞೆಯನ್ನು ಸಾರುತ್ತಿವೆ. ನೋಬೆಲ್ ಪ್ರಶಸ್ತಿ ವಿಜೇತ ರವೀಂದ್ರನಾಥ ಟ್ಯಾಗೋರ್ ಅವರನ್ನು ಸನ್ಮಾನಿಸಲು ಕೃಂಬಿಗಲ್ ರೂಪಿಸಿದ ಲಾಲ್ ಬಾಗ್ ಅನ್ನು ಆರಿಸಿಕೊಳ್ಳಲಾಯಿತು. ದಿವಾನರಾದ ಸರ್. ಮಿರ್ಜಾ ಇಸ್ಮಾಯಿಲರು ಕೃಂಬಿಗಲ್ ಅವರನ್ನು ಮೈಸೂರು ರಾಜ್ಯದ ಪ್ರಧಾನ ವಾಸ್ತುಶಿಲ್ಪಿಗಳಾಗಿ ನೇಮಕ ಮಾಡಿದರು. ಬೆಂಗಳೂರಿನ ಮಹಾನಗರ ಪಾಲಿಕೆಯ ಕಟ್ಟಡವು ಆಗಲೆ ರೂಪು ತಳೆಯಿತು. ಕೃಂಬಿಗಲ್ ಬೆಂಗಳೂರಿನ ಸರ್ಕಾರಿ ಮ್ಯೂಸಿಯಂನ ಮೇಲ್ವಿಚಾರಕರಾಗಿದ್ದರು. ಇಂದು ಬೆಂಗಳೂರು ಉದ್ಯಾನನಗರಿ ಎಂದು ಹೆಸರು ಪಡೆಯುವಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. ಅವರನ್ನು ಗುರುತಿಸಿ ಬೆಂಗಳೂರು ಮಹಾನಗರ ಪಾಲಿಕೆ, ಲಾಲ್ ಬಾಗಿನ ಪಕ್ಕದ ರಸ್ತೆಗೆ ಕೃಂಬಿಗಲ್ ರಸ್ತೆಯೆಂದು ನಾಮಕರಣ ಮಾಡಿ ಗೌರವ ಸಲ್ಲಿಸಿದೆ.

www.FirstRanker.com

**ಪ್ರಶ್ನೆಗಳು:**

**1. ಜಿ. ಹೆಚ್. ಕೃಂಬಿಗಲ್ ರವರು ಪ್ರಸಿದ್ಧ --------**

1) ಉದ್ಯಾನವಿನ್ಯಾಸಗಾರ 2) ಜರ್ಮನ್ ಕವಿ

3) ಕ್ರೀಡಾಪಟು 4) ಸಂಗೀತಗಾರ

**2. ಕೃಂಬಿಗಲ್ ಅವರಿಗೆ--------- ಇರುವ ದೇಶಗಳಲ್ಲಿ ಕೆಲಸ ಮಾಡುವ ಬಯಕೆ ಇತ್ತು.**

1) ಚೀಣಿಯರ ಆಳ್ವಿಕೆ 2) ಕೊರಿಯನ್ನರ ಆಳ್ವಿಕೆ

3) ರಷ್ಯಾನ್ನರ ಆಳ್ವಿಕೆ 4) ಇಂಗ್ಲೆಂಡ್ ಆಳ್ವಿಕೆ

**3. ರಾಜ್ಯದ ಉದ್ಯಾನಗಳ ಅಭಿವೃದ್ಧಿಯ ಸಲುವಾಗಿ ಸಮರ್ಥ ತಜ್ಞರೊಬ್ಬರು ಬೇಕೆಂದು ಲಂಡನ್ನಿನ ಅಧಿಕಾರಿಗಳಿಗೆ ---------- ಪತ್ರ ಬರೆದರು.**

1) ದಿವಾನ್ ಮಿರ್ಜಾ ಇಸ್ಮಾಯಿಲ್ 2) ಮೈಸೂರು ಒಡೆಯರು

3) ಸಯ್ಯಾಜಿರಾವ್ ಮಹಾರಾಜರು 4) ವೈಸರಾಯ

**4. ಕೃಂಬಿಗಲ್ ಬೆಂಗಳೂರಿನ ಲಾಲ್ ಬಾಗ್ ಸಸ್ಯೋದ್ಯಾನದ ------- ನೇಮಕಗೊಂಡರು.**

1) ಕ್ಯುರೇಟರಾಗಿ 2) ಪ್ರಧಾನಿಯಾಗಿ

3) ರಾಜ್ಯಪಾಲರಾಗಿ 4) ಮುಖ್ಯಮಂತ್ರಿಯಾಗಿ

**5. ನೋಬೆಲ್ ಪ್ರಶಸ್ತಿ ವಿಜೇತ ರವೀಂದ್ರನಾಥ ಟ್ಯಾಗೋರ್ ಅವರನ್ನು ಸನ್ಮಾನಿಸಲು-----ಅನ್ನು ಆರಿಸಿಕೊಳ್ಳಲಾಯಿತು.**

1) ಬೃಂದಾವನ 2) ಲಾಲ್ ಬಾಗ್

3) ಕಬ್ಬನ್ ಪಾರ್ಕ್ 4) ಲಾಲ್ ಬಾಗ್

## (ಅನ್ವಯಿಕ ವ್ಯಾಕರಣ) = 16 ಅಂಕಗಳು.

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.( 4ಕ್ಕೆ ಮಾತ್ರ )** **1X4=4**

**1.' ಗುರೂಪದೇಶ' -ಈ ಪದವು -------- ಸಂಧಿಗೆ ಉದಾಹರಣೆಯಾಗಿದೆ.**

1) ಲೋಪಸಂಧಿ 2) ಆದೇಶ ಸಂಧಿ

3) ಸವರ್ಣದೀರ್ಘಸಂಧಿ 4) ಗುಣಸಂಧಿ

**2. 'ಕೆಂದಾವರೆ '- ಈ ಪದವು --------- ಸಮಾಸವಾಗಿದೆ.**

1) ತತ್ಪುರುಷ ಸಮಾಸ 2) ದ್ವಿಗು ಸಮಾಸ

3) ಕರ್ಮಧಾರೆಯ ಸಮಾಸ 4) ದ್ವಂದ್ವ ಸಮಾಸ

**3.' ಬಂಜೆ; -ಈ ಪದದ ತತ್ಸಮ ರೂಪ ------------**

1) ವಂಧ್ಯಾ 2) ಬಜೆ

3) ಬಜ್ಜೆ 4) ಬಂಜರೆ

**4.'ವೀರ' - ಈ ಪದದ ವಿರುದ್ಧಾರ್ಥಕ ಪದ ----------**

www.FirstRanker.com

1) ಹೇಡಿ 2) ವಿಸುರ

3) ಸುರಾಸುರ 4) ಬೀರ

**5. 'ಪತಿಯವರಸರಕ್ಕೆ 'ಈ ಪದವು ----- ವಿಭಕ್ತಿ ಪ್ರತ್ಯಯದಲ್ಲಿದೆ.**

1) ಪ್ರಥಮಾವಿಭಕ್ತಿ 2) ದ್ವಿತೀಯಾವಿಭಕ್ತಿ

3) ಚತುರ್ಥೀವಿಭಕ್ತಿ 4) ಸಪ್ತಮೀವಿಭಕ್ತಿ

**IV ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. (4ಕ್ಕೆ ಮಾತ್ರ)** **1X4=4**

**1.' ಅರ್ತಿ' - ಈ ಪದದ ಸಮಾನಾರ್ಥಕಪದ ------**

1) ಪ್ರತಿಧ್ವನಿ 2) ಮೆಲುದನಿ

3) ಕೀಳುದನಿ 4) ಪ್ರೀತಿ

**2. 'ಮೊತ್ತಮೊದಲು' ಇದು -----ಪದಕ್ಕೆ ಉದಾಹರಣೆಯಾಗಿದೆ.**

1) ಜೋಡುನುಡಿ 2) ದ್ವಿರುಕ್ತಿ

3) ಅನುಕರಣಾವ್ಯಯ 4) ಕ್ರಿಯಾಪದ

**3. 'ಕುರುಡ' -------- ನಾಮಪದಕ್ಕೆ ಉದಾಹರಣೆಯಾಗಿದೆ.**

1) ರೂಢನಾಮ 2) ಅಂಕಿತನಾಮ

3) ಅನ್ವರ್ಥನಾಮ 4) ಸರ್ವನಾಮ

**4. 'ಶಬರಿ ಹಣ್ಣುಗಳನ್ನು ತಂದಳು.' - ಈ ವಾಕ್ಯದಲ್ಲಿ 'ತಂದಳು' ಎಂಬುದು ------- ಪದವಾಗಿದೆ.**

1) ಕರ್ತೃಪದ 2) ಕರ್ಮಪದ

3) ಕ್ರಿಯಾಪದ 4) ಜೋಡಿಪದ

**5. 'ಇದು ಬಂಗಾರದ ತಟ್ಟೆಯಲ್ಲವೇ?'.ಈ ವಾಕ್ಯದಲ್ಲಿರುವ ಸರ್ವನಾಮ -------**

1) ಅಲ್ಲವೇ 2) ತಟ್ಟೆ

3) ಇದು 4) ಬಂಗಾರದ

www.FirstRanker.com

**V. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.( 4ಕ್ಕೆ ಮಾತ್ರ )** **1X4=4**

**1.' ಬಂದನು' ಈ ಪದವನ್ನು ವರ್ತಮಾನಕಾಲಕ್ಕೆ ಪರಿವರ್ತಿಸಿದಾಗ ---------ಆಗುತ್ತದೆ.**

1) ಬಂದಾನು 2) ಬರುತ್ತಿದ್ದಾನೆ

3) ಬಂದನೆ 4) ಬರಲಿ

**2. ' ಅಶೋಕನು ಯುದ್ಧವನ್ನು ಮಾಡಿದನು'. ಇದರ ಕರ್ಮಣಿ ಪ್ರಯೋಗ -----**

1) ಅಶೋಕನು ಯುದ್ಧವನ್ನು ಮಾಡಿಸಿದನು. 2) ಮಾಡಿಸಿದನು ಅಶೋಕನು ಯುದ್ಧವನ್ನು.

3) ಯುದ್ಧವ ಮಾಡಿಸಿದನು ಅಶೋಕ 4) ಯುದ್ಧವು ಅಶೋಕನಿಂದ ಮಾಡಲ್ಪಟ್ಟಿತು.

**3. 'ಮಕ್ಕಳು' ಈ ಪದಕ್ಕೆ ಜೋಡಿಪದ ------ ಆಗುತ್ತದೆ.**

1) ಮರಿ 2) ಮಠ

3) ಗಿಕ್ಕಳು 4) ಪಕ್ಕಳು

**4.'ಮರದ ತುತ್ತತುದಿಯಲ್ಲಿದ್ದ ಸಣ್ಣಸಣ್ಣ ಕಾಯಿಗಳು ಪಟಪಟನೆ ಧರೆಗುರುಳಿದವು'.ಈ ವಾಕ್ಯದಲ್ಲಿರುವ ಅನುಕರಣಾವ್ಯಯ--------**

1) ಮರದ 2) ತುತ್ತತುದಿ

3) ಸಣ್ಣಸಣ್ಣ 4) ಪಟಪಟನೆ

www.FirstRanker.com

**5. 'ಎತ್ತು ಏರಿಗೆ ಎಳೆದರೆ'------ಈ ಗಾದೆಯನ್ನು ಪೂರ್ಣಗೊಳಿಸಿ.**

1) ಕೊಡ ನೀರಿಗೆ ಬಂತು 2) ನೊಗ ನೀರಿಗೆ ಇಳಿಯಿತು

3) ಕೋಣ ನೀರಿಗೆ ಎಳೆಯಿತು 4) ಕತ್ತು ಮಲ್ಲಗೆ ಜಾರಿತು

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. (4ಕ್ಕೆ ಮಾತ್ರ)** **1X4=4**

**1. 'ಹೋದಾನು' ಈ ಪದವು ------ ಪದಕ್ಕೆ ಉದಾಹರಣೆಯಾಗಿದೆ.**

1) ಸಂಭವನಾರ್ಥಕ 2) ಭಾವನಾಮ

3) ನಿಷೇಧಾರ್ಥಕ 4) ಸರ್ವನಾಮ

**2. 'ಮಕ್ಕಳು ಚೆನ್ನಾಗಿ ಓದಲಿ'.ಈವಾಕ್ಯ ------ಉದಾಹರಣೆಯಾಗಿದೆ.**

1) ಗುಣವಾಚಕ 2) ಸಂಖ್ಯಾ ವಾಚಕ

3) ಸಂಖ್ಯೇಯ ವಾಚಕ 4) ವಿಧ್ಯರ್ಥಕ

**3.'ಮಲಗದು 'ಈ ಪದವು ---- ಗೆ ಉದಾಹರಣೆಯಾಗಿದೆ.**

1) ನಿಷೇಧಾರ್ಥಕ 2) ಪರಿಮಾಣವಾಚಕ

3) ಭಾವನಾಮ 4) ದಿಗ್ವಾಚಕ

**4. 'ತಂಬಾಕು' ಇದು ----- ಭಾಷೆಯ ಪದವಾಗಿದೆ.**

1) ಗ್ರೀಕ್ 2) ಅರಬ್ಬೀ

3) ಉರ್ದು 4) ಪೋರ್ಚ್‌ಗೀಸ್

**5.'ಪ್ರಪ್ರಥಮ' ಎಂಬುದು ಯಾವ ಪದಕ್ಕೆ ಉದಾಹರಣೆಯಾಗಿದೆ.**

1) ಅನುಕರಣಾವ್ಯಯ 2) ಕೃದಂತ

3) ದ್ವಿರುಕ್ತಿ 4) ಜೋಡುನುಡಿ

## (ಬಹು ಆಯ್ಕೆ ಪ್ರಶ್ನೆ- ಪಠ್ಯಗಳ ಅಧ್ಯಯನ) =14 ಅಂಕಗಳು

**VII. ಈ ಕೆಳಗೆ ಕೊಟ್ಟಿರುವ 'ಹಲಗಲಿ ಬೇಡರು' ಪಠ್ಯದಲ್ಲಿನ ಪರಿಚಿತ ಲಾವಣಿಯನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (1X4=4 ಅಂಕಗಳು)**

www.FirstRanker.com

ಹಲಗಲಿ ಬೇಡರು

ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡಿಯುವ ಜನಕ
ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೊ ದಡಕ ॥ ಪ ॥

ವಿಲಾಯಿತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ
ಹಲಗರಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ

ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗರಾಮ ಮಸಲತ್ತ

ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ

ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ

ಹೊಡಿರಿ ಜಗಳ ಕೂಡಿ ತೀರ್ತೇವು ಕುಮುಕಿ ನಮ್ಮ ನಮ್ಮದ್ಯಾವತ್ತ

ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ.

ಕಾರಕೂನನ ಕಪಾಳಕ ಬಡಿದರೆ ಸಿಪಾಯಿ ನೆಲಕ ಬಿತ್ತ

ಆಗಿಂದಾಗ ದುಃಖದ ಸುದ್ದಿ ಸಾಹೇಬಗ ಹೋಯ್ತು

ಸಿಟ್ಟೆಲಿ ಮುಂಗೈ ಕಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಗ

ಕುದುರೆ ಮಂದಿ ಕೂಡಿ ಮುಟ್ಟಿತೊ ಹಲಗಲಿ ತಳದ ಮ್ಯಾಗ

ಒಳಗಿನ ಮಂದಿ ಗುಂಡು ಹೊಡೆದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ

ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೊ, ಹಿಡಿದು ದಂಗ

ಕಾಗದ ಬರೆದು ಕಳುವ್ಯಾರೆ ಬೇಗ, ದಂಡು ಬರಲೆಂತ ಹೀಂಗ

ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ ||೨||

www.FirstRanker.com

ಬೆನ್ನ ಬೆನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ಹಾಂಗ

ನಡುವೆ ಹಾಕ್ಕೊಂಡು ಹೊಡೆದರೊ ಗುಂಡ ಕರುಣ ಇಲ್ಲದ್ಹಾಂಗ

ಚಟಕಾರರು ಚೌಕಿ ಮಾಡುತ, ನಡೆದರೊ ಹೇಳದೆ ಗುಡದಾಗ

ಅಗಸಿಗೆ ಬಂದು 'ಹೆಬಲಕ್' ಸಾಬ ಹೇಳುತ್ತಾನ ಬುದ್ಧಿಮಾತ

ಕೊಡುತಿವಿ ಕಬುಲ ಕೇಳರಿ ಮಾತ, ಹೋಗಬ್ಯಾಡರಿ ಸತ್ತ

ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊ ಮುಂದಿತ್ತ ||೩||

ಜಡಗ ಹೇಳುತ್ತಾನೊ ಹೊಡೆಯಿರಿ ಇವರ ಪೂರ ಘಾತಕರಾ

ಇಸವಾಸಘಾತಕ ಮಾಡಿದವರಿವರ, ನಂಬಿಗಿಲ್ಲ ನಮಗ ಪಿತೂರಾ

ಮೋಸ ಮಾಡಿ ನಮದೇಶ ಗೆದಿತಾರೊ ಮುಂದ ನಮಗ ಘೋರಾ

ಅಂದು ಹೊಡೆದನೊ ಒಂದು ಗುಂಡಿಗೆ ಆದ ಸಾಹೇಬನ ಟಾರಾ

'ಕಾರ' ಸಾಹೇಬ ಬೆಂಕಿ ಚೂರಾದ ಲೂಟಿ ಮಾಡಂತನೊ ಊರಾ

ಸಿಟ್ಟಿಲೆ ಹೊಡೆದರು ಸಿಡಿಲಸಿಡಿದ್ಹಾಂಗ ಗುಂಡು ಸುರಿದಾವ ಭರ್ ಪೂರ.

**ಪ್ರಶ್ನೆಗಳು:**

**1. ಹಲಗಲಿ ಬೇಡರ-------- ಕಿತ್ತುಕೊಳ್ಳಲು ಹುಕುಮ ಬಂದಿತು.**

1) ಹತಾರ 2) ಸಿತಾರಾ

3) ಹೊಲವ 4) ಗುಡಿಯ

**2. ಒಳಗಿಂದೊಳಗೆ ವಚನ ಕೊಟ್ಟವರು --------.**

1) ಸಿಪಾಯಿ 2) ಕಾರಕೂನ

3) ಹಲಗಲಿ ಬೇಡರು 4) ಸಾಹೇಬ

**3.ಹೊಡೆದ ಗುಂಡುಗಳು ------- ಸಿಡಿಲು ಸಿಡಿದ್ಹಾಂಗ.**

1) ಮುಂಗಾರಿನ 2) ಹಿಂಗಾರಿನ

3) ಕೋಪದ 4) ಉಕ್ಕಿನ

**4. ಊರ ಅಗಸಿಗೆ ಬಂದು ಬುದ್ಧಿಮಾತು ಹೇಳಿದವರು --------**

1) ಪೂಜಾರಿ ಹನುಮಾ 2) ಬ್ಯಾಡರ ಬಾಲ

3) ಜಡಗರಾಮಾ 4) ಹೆಬಲಕ

**VIII. ಈ ಕೆಳಗೆ ಕೊಟ್ಟಿರುವ ಎ.ಎನ್. ಮೂರ್ತಿರಾವ್ ಅವರ 'ವ್ಯಾಘ್ರಗೀತೆ' ಪಠ್ಯದಲ್ಲಿನ ಪರಿಚಿತ ಗದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

**(1X5=5 ಅಂಕಗಳು)**

ಒಂದು ದಿನ ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣ ಕಟ್ಟಿ ಸ್ನೇಹಿತರನ್ನು ನೋಡಿಕೊಂಡು ಅಲ್ಲಿಂದ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು.ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ, ಆದರೂ ಬೆಳದಿಂಗಳ

www.FirstRanker.com

ದಿನ; ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಸೇರಿಕೊಳ್ಳಬಹುದು ಎಂದುಕೊಂಡು ಬೇಗಬೇಗ ನಡೆದರು. ಆದರೂ ಕಣಿವೆಗೆ ಬರುವ ವೇಳೆಗೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು. ಹಸಿವಿನ ಜೊತೆಗೆ ಸ್ವಲ್ಪ ಭಯವು ಸೇರಿ ಅವರ ಕಾಲು ಮತ್ತಷ್ಟು ಚುರುಕಾಯಿತು.

ರಸ್ತೆಗೆ ಸ್ವಲ್ಪ ದೂರದಲ್ಲಿ ಇದ್ದ ಗುಹೆಯಲ್ಲಿ ಹುಲಿಯೊಂದು ಮಲಗಿತ್ತು ದಿನವೆಲ್ಲ ನಿದ್ದೆ ಮಾಡಿ ಆಗತಾನೇ ಆಕಳಿಸುತ್ತಾ ಎದ್ದ ಹುಲಿಗೆ ತನ್ನ ಹೊಟ್ಟೆ ಬರೆದಾಗಿದೆ ಎಂದು ಭಾಸವಾಯಿತು. ವಿಧಿಯು ಆಹಾರಕ್ಕೆ ಏನನ್ನು ಒದಗಿಸುವುದು ಎಂದು ಯೋಚಿಸುತ್ತಾ ಒಂದೆರಡು ಸಾರಿ ಮೈಮುರಿದು ಹೊರಟಿತು. ಬಂಡೆಗಳ ನಡುವೆ ನಡೆಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ಮಧುರವಾದ ಗಂಧವೊಂದು ಅದರ ಘ್ರಾಣೇಂದ್ರಿಯವನ್ನು ಆಕ್ರಮಿಸಿತು. ಸುವಾಸನೆಯ ಜಾಡನ್ನು ಹಿಡಿದು ನಿಶ್ಯಬ್ದವಾಗಿ ನಡೆಯುತ್ತಾ ರಸ್ತೆಯ ಬಳಿಗೆ ಬಂದು ಶಾನುಭೋಗರನ್ನು ಕಂಡಿತು. ಅವರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. ಹುಲಿಯ ಆನಂದಕ್ಕೆ ಕೊರತೆ ಒಂದಿತ್ತು; ಆ ಶಾನುಭೋಗರು ಹುಲಿಗೆ ಅಭಿಮುಖವಾಗಿರದೆ ಅದರ ಕಡೆಗೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಯಾರನ್ನೇ ಆಗಲಿ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ.ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೆ.

ಆದ್ದರಿಂದ ಹುಲಿ ಹೇಗಾದರೂ ಮಾಡಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕು. ಆದರೆ ಅವರನ್ನು ಹಾದು ಮುಂದೆ ಹೋಗುವುದು ಕಷ್ಟ. ನಿಶ್ಯಬ್ದವಾಗಿ ಅವರ ಹಿಂದೆಯೇ ನಡೆದು, ಆನಂತರ ಅವನ ಮುಂಭಾಗಕ್ಕೆ ನೆಗೆದು ಕೂಡಲೇ ತಿರುಗಿ ಅವರ ಮೇಲೆ ಬೀಳಬೇಕು. ತನ್ನ ಬಡಬಂಧುವಾದ ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿಬಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು.

ಇತ್ತ ಶಾನುಭೋಗರಿಗೆ ಇದ್ದಕ್ಕಿದ್ದ ಹಾಗೆ ಮನಸ್ಸಿನಲ್ಲಿ ಅಳುಕು ಹುಟ್ಟಿತು. ಪಂಚೇಂದ್ರಿಯಗಳಿಗೆ ಗೋಚರವಾಗದೇ ಇರುವಂತಹ ಅಪಾಯವನ್ನು ಸೂಚಿಸುವ ಆರನೆಯ ಇಂದ್ರಿಯ ಒಂದು ಇದೆಯೆಂದು ಬಲ್ಲವರು ಹೇಳುತ್ತಾರೆ. ಶಾನುಭೋಗರ ಇಂದ್ರಿಯ ಜಾಗೃತವಾಗಿ ಹುಲಿ ಬಂದದ್ದು ಅವರಿಗೆ ತಿಳಿಯಿತು. ಆದರೂ ಅದು ಹಿಂದಿನಿಂದ ಮೇಲೆ ಬಿಡುವುದಿಲ್ಲವೆಂದು ಶಾನುಭೋಗರು ಬಲ್ಲರು. ಹುಲಿಗೆ ಹೊಳೆದ ಯೋಚನೆಯೇ ಅವರಿಗೆ ಹೊಳೆಯಿತು. ಹುಲಿ ಹತ್ತಿರ ಬಂದು ನೆಗೆಯಿತು. ಅದು ತಮ್ಮ ತಲೆಯ ಮೇಲೆ ಬರುವ ವೇಳೆಗೆ ಸರಿಯಾಗಿ ಶಾನುಭೋಗರು ಸ್ವಲ್ಪ ಬಾಗಿದರು. ಹುಲಿ ನೆಲಕ್ಕೆ ಇಳಿದು ತಮ್ಮ ಕಡೆಗೆ ತಿರುಗುವುದರೊಳಗೆ ಅವರೂ ಹಿಂತಿರುಗಿ ಬಂದ ದಾರಿಯಲ್ಲಿ ನಡೆದರು.ಹುಲಿ ಕತ್ತೆತ್ತಿ ನೋಡಿದರೆ ಶಾನುಭೋಗರು ಮತ್ತೆ ನನ್ನ ಕಡೆ ಬೆನ್ನು ತಿರುಗಿಸಿದ್ದಾರೆ. ಹುಲಿಯ ಮುಖ ಪೆಚ್ಚಾಯಿತು.

**ಪ್ರಶ್ನೆಗಳು:**

**1. ಶಾನುಭೋಗರು ಚಿಕ್ಕನಾಯಕನಹಳ್ಳಿಗೆ---------ಗೆ ಹೋಗಿದ್ದರು.**

1) ಎತ್ತುಕೊಳ್ಳಲು 2) ಆಸ್ತಿ ಮಾಲು

3) ದಿನಸಿ ಕೊಳ್ಳಲು 4) ಇರಸಾಲಿಗಾಗಿ

www.FirstRanker.com

**2. ಶಾನುಭೋಗರು ತಮ್ಮ ಊರು ತಲುಪಲು ----- ದಾಟಿ ಹೋಗಬೇಕು.**

1) ಮದಲಿಂಗ ಕಣಿವೆ 2) ಚಿಕ್ಕನಾಯಕನಹಳ್ಳಿ

3) ಬಾಣಾವಾರ ಕಣಿವೆ 4) ಕತ್ತಲಗುಡ್ಡ

**3. ಹುಲಿಗೆ ಪರಮಾನಂದವಾಗಲು ಕಾರಣ ----------**

1) ಶಾನುಭೋಗರ ದುಂಡು ದುಂಡಾದ ಶರೀರ 2) ಗಂಧದ ಸುವಾಸನೆ

3) ಬಡಬೆಕ್ಕನ್ನು ನೆನೆದು 4) ಹುಲಿಯ ಧರ್ಮಶ್ರದ್ಧೆ

**4. ಶಾನುಭೋಗರು ಹುಲಿಗೆ ------- ಬಂದರೆ ಮಾತ್ರ ಹುಲಿ ಅವರನ್ನು ಕೊಲ್ಲುವುದು.**

1) ಮೇಲಕ್ಕೆ 2) ಪಕ್ಕಕ್ಕೆ

3) ಹಿಮ್ಮುಖವಾಗಿ 4) ಅಭಿಮುಖವಾಗಿ

**5. ಶಾನುಭೋಗರಿಗೆ --------- ಜಾಗೃತವಾಗಿ ಹುಲಿ ಬಂದದ್ದು ಅವರಿಗೆ ತಿಳಿಯಿತು.**

1) ಖಿರ್ದಿಪುಸ್ತಕ 2) ದೇವರ ಮಂತ್ರ

3) ಗುರುವಿನ ಪಾಠ 4) ಆರನೆಯ ಇಂದ್ರಿಯ

www.FirstRanker.com

**IX. ಈ ಕೆಳಗೆ ಕೊಟ್ಟಿರುವ ಪಠ್ಯಪೂರಕ ಅಧ್ಯಯನದ ಪರಿಚಿತ ಗದ್ಯಭಾಗ'ಭಗತ್ ಸಿಂಗ್'ಗದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

**1X5=5**

ಹನ್ನೆರಡು ವರ್ಷದ ಒಬ್ಬ ಬಾಲಕ ಅಮೃತಸರದ ಜಲಿಯನ್ ವಾಲಾಬಾಗ್ ನಲ್ಲಿ ಮೂಕನಂತೆ ಅತ್ತಿಂದಿತ್ತ ಓಡಾಡುತ್ತಿದ್ದ. ಶಾಲೆಗೆ ಹೋಗಬೇಕಾಗಿದ್ದ ಆ ಬಾಲಕ ಅಂದು ತನ್ನ ಹಳ್ಳಿಯಿಂದ ರೈಲಿನಲ್ಲಿ ಅಮೃತಸರದಲ್ಲಿ ಬಂದಿಳಿದಿದ್ದ. ಒಂದೆರೆಡು ಪುಸ್ತಕಗಳು ಹಾಗೂ ಒಂದು ಪುಟ್ಟ ಡಬ್ಬಿಯಿದ್ದ ಕೈಚೀಲ ಅವನ ಬಳಿಯೇ ಇತ್ತು. ತುಸು ಹೊತ್ತಿನ ನಂತರ ಹುಡುಗ ಜಲಿಯನ್ ವಾಲಾಬಾಗ್ ನಲ್ಲಿ ಒಂದೆಡೆ ಅಂತರರ್ಮುಖಿಯಾಗಿ ಬಹುಕಾಲ ನಿಂತ. ನಂತರ ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಹಣೆಗಿಟ್ಟುಕೊಂಡ. ಇನ್ನಷ್ಟನ್ನು ತನ್ನಲ್ಲಿದ್ದ ಡಬ್ಬಿಯಲ್ಲಿ ಶೇಖರಿಸಿಕೊಂಡು ಹಿಂದಿರುಗಿದ. ರಾತ್ರಿ ಮನೆಗೆ ಹಿಂದಿರುಗಿದಾಗ ಅವನ ಸಹೋದರಿ ಎಂದಿನಂತೆ ಅವನನ್ನು ಊಟಕ್ಕೆಬ್ಬಿಸಿದರೆ ಒಲ್ಲೆನೆಂದು ಮುಖ ತಿರುಗಿಸಿದ. ಅವನಿಗೆ ಪ್ರಿಯವಾದ ಮಾವಿನ ಹಣ್ಣೊಂದನ್ನು ಕೂಡ ನಿರಾಕರಿಸಿದ. ಅವಳನ್ನು ಮನೆಯ ಹಿಂಭಾಗಕ್ಕೆ ಕರೆದೊಯ್ದು, ತನ್ನ ಡಬ್ಬಿಯಲ್ಲಿದ್ದ ಮಣ್ಣನ್ನು ತೋರಿಸಿದ. ರಕ್ತದಲ್ಲಿ

ಕಲೆಸಿದಂತಿದ್ದ ಆ ಮಣ್ಣು ಎಲ್ಲಿಯದೆಂದು ತಿಳಿದಾಗ ಅವನ ಉಪವಾಸಕ್ಕೆ ಕಾರಣ ಅವಳಿಗೆ ಗೊತ್ತಾಯಿತು. 'ತ್ಯಾಗದ ಪ್ರತೀಕ ಆ ಮಣ್ಣು' ಎಂದವಳಿಗೆ ತಿಳಿಯ ಹೇಳಿದ.

1919 ರ ಎಪ್ರಿಲ್ 13 ರಂದು ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಪ್ರಾಣ ಕಳೆದುಕೊಂಡಿದ್ದವರಿಗೆ ನಮನ ಸಲ್ಲಿಸಲು ಹೋಗಿದ್ದ ಆ ಬಾಲಕ ಭಗತ ಸಿಂಗ್. ಇಂದು ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಹೀಗಿದೆ: "ಎಪ್ರಿಲ್ - 13-1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ. "ಭಗತ್ ಸಿಂಗ್ ಅಲ್ಲಿಗೆ ಹೋಗಿ ಅಂತರ್ಮುಖಿಯಾಗಿ ನಿಂತಾಗ ಈ ಭಾವನೆ ಅವನ ಮನಸ್ಸಿನಲ್ಲಿ ಹಾಯುತ್ತಿರಬೇಕು.

ಜಲಿಯನ ವಾಲಾಬಾಗ್ ನಲ್ಲಿ ನೆರೆದಿದ್ದ ಜನಕ್ಕೆ ತಾವೊಂದು ರಾಜಕೀಯ ಆಂದೋಳನದಲ್ಲಿ ಭಾಗಿಯಾಗಿರಬೇಕೆಂಬ ಆಕಾಂಕ್ಷೆಯಾಗಲಿ ಹುತಾತ್ಮರಾಗಬೇಕೆಂಬ ಅಭಿಲಾಷೆಯಾಗಲಿ ಇದ್ದಿರಲಾರದು. ಜನರಲ್ ಡಯರ್ ಸಹ ತನ್ನ ಪೈಶಾಚಿಕ ಘಾತುಕತೆಯನ್ನುಳಿದ ಬೇರಾವ ಭಾವನೆಯಿಂದಲೂ ಪ್ರೇರಿತನಾಗಿದ್ದ ಎಂದು ನಂಬುವುದು ಕಷ್ಟ. ಕ್ರೂರ ಮಾರ್ಗದಿಂದ ಭಾರತೀಯರನ್ನೂ ಬಗ್ಗು ಬಡಿಯಬಹುದಿಂದು ಅವನ ಎಣಿಕೆ. ಬ್ರಿಟಿಷ್ ಸಾಮ್ರಾಜ್ಯದ ಅನವರತ ಏಳಿಗೆಗೆ ಇದಕ್ಕಿಂತಲೂ ಸುಲಭವಾದ ಮಾರ್ಗವನ್ನು ಚಿಂತಿಸಲು ಅವನು ಅಶಕ್ತನಾಗಿದ್ದ. ಒಟ್ಟು 1650 ಸುತ್ತುಗಳಷ್ಟು ಗುಂಡಿನ ಮಳೆ ಕರೆಯಿಸಿದ್ದ ಅವನು ಹೆಮ್ಮೆಯಿಂದ ಹೇಳಿಕೊಂಡದ್ದು ಇದು "ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ". ಅಂದು ಪ್ರಾಣ ಕಳೆದುಕೊಂಡವರ ಸಂಖ್ಯೆ ಇದನ್ನು ಖಚಿತಗೊಳಿಸಿತ್ತು.

**ಪ್ರಶ್ನೆಗಳು:**

**1. 'ಬಾಲಕ ಭಗತ್ ಸಿಂಗ್ ರೈಲಿನಲ್ಲಿ ಅಮೃತಸರಕ್ಕೆ ಬಂದಾಗ ಅವನ ಬಳಿ ಏನಿತ್ತು?**

1) ಮಣ್ಣು 2) ಪುಸ್ತಕಗಳು, ಕೈಚೀಲ

3) ಮಾವಿನ ಹಣ್ಣು 4) ಬಾವುಟ

**2. ಬಾಲಕ ಭಗತ್ ಸಿಂಗ್ ಡಬ್ಬಿಯಲ್ಲಿದ್ದ ಮಣ್ಣನ್ನು ಯಾರಿಗೆ ತೋರಿಸಿದನು?**

1) ಗೆಳೆಯರಿಗೆ 2) ತಂದೆಗೆ

3) ತಾಯಿಗೆ 4) ಸಹೋದರಿಗೆ

**3. ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಯಾರ ಗುಂಡುಗಳಿಗೆ ಭಾರತೀಯರು ಆಹುತಿಯಾದರು?.**

1) ಮುಸಲ್ಮಾನರ 2) ಹಿಂದೂಗಳ

3) ಬ್ರೀಟೀಷರ 4) ಸಿಖ್ ಗಳ

**4. ಕ್ರೂರ ಮಾರ್ಗದಿಂದ ಭಾರತೀಯರನ್ನು ಬಗ್ಗು ಬಡಿಯಬಹುದು ಎಂಬುದು ಯಾರ ಎಣಿಕೆಯಾಗಿತ್ತು?**

www.FirstRanker.com

1) ಭಗತ್ ಸಿಂಗ್ 2) ಜನರಲ್ ಡಯರ್

3) ಸತ್ಯಾಗ್ರಹಿಗಳು 4) ರಾಜಕೀಯ ಪಕ್ಷದವರ

**5. ಜಲಿಯನ್ ವಾಲಾಬಾಗ್ ನ ಹತ್ಯಾಕಾಂಡದಲ್ಲಿ ಎಷ್ಟು ಸುತ್ತಿನ ಗುಂಡಿನ ಮಳೆ ಸುರಿದಿತ್ತು?**

1) 1650 2) 1919

3) 2000 4) 1616

## ಭಾಗ – B (40 ಅಂಕಗಳು)

## (ಬರವಣಿಗೆ ಕೌಶಲ್ಯ) =12 ಅಂಕಗಳು

**X. ದೂರದೂರಿನಲ್ಲಿರುವ ನಿಮ್ಮ ತಾಯಿಗೆ ಮಹಾಮಾರಿ ಕೊವಿಡ್ – 19 ಸೋಂಕು ಹರಡದಂತೆ ಯಾವ ರೀತಿಯ ಮುನ್ನೆಚ್ಚರಿಕೆ ವಹಿಸಬೇಕು ಎಂಬುದನ್ನು ವಿವರಿಸುತ್ತಾ ಪತ್ರ ಬರೆಯಿರಿ. 1X4=4**

**XI. ಆನ್ ಲೈನ್ ಪಾಠಗಳು ಮಕ್ಕಳ ಮೇಲೆ ಬೀರುವ ದುಷ್ಪರಿಣಾಮಗಳನ್ನು ಜನರು ಖಂಡಿಸಿದ ಘಟನೆಯನ್ನು ಕುರಿತು ಒಂದು ವರದಿ ಸಿದ್ಧಪಡಿಸಿ. 1X4=4**

www.FirstRanker.com

**XII.ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1X4=4**

1. ಸ್ವಯಂ ಉದ್ಯೋಗ
2. ನಾನು ಸೈನಿಕನಾದರೆ
3. ವಲಸಿಗರ ಸಮಸ್ಯೆ

## (ಪಠ್ಯಗಳ ಅಧ್ಯಯನ) =28 ಅಂಕಗಳು

**XIII.ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ. 2X4=08**

1. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?

FirstRanker.com
Firstranker's choice


2. ಕವಿ ಜಿ.ಎಸ್. ಶಿವರುದ್ರಪ್ಪನವರು ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕೆಂದಿದ್ದಾರೆ?

3. ಮೃಗದ ಬಾಹ್ಯ ಆಕಾರ ಹೇಗಿತ್ತು?

4. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?

**XIV. ಈ ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ.** **3X2= 6**

1. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?

2.ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?

**XV. ಈ ಕೆಳಗಿನ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ** **3X2=6**

**1.** "ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು."

**ಅಥವಾ**

"ಪೊನ್ನನೆಲ್ಲಮಂ ನೀನೆ ಕೊಂಡೆ"

2. "ಬೇರೆ ಬಣ್ಣವನೆ ಕಾಣೆ"

**ಅಥವಾ**

"ನಿನ್ನಪದೆಸೆಯ ಬಯಸುವವನಲ್ಲ"

**XVI. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **4X1=04**

1. ದುಷ್ಟಬುದ್ಧಿಯ ಮಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

**ಅಥವಾ**

ವಿಶ್ವೇಶ್ವರಯ್ಯನವರು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

**XVII. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **4X1=04**

1. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

*********

www.FirstRanker.com